**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

## ಕ್ರಿ ಮೊ ಸಂಖ್ಯೆ: 682/2016

**ಫಿರ್ಯಾದಿ** : ರಾಜ್ಯದ ಪರ ಅಜ್ಜಂಪುರ ಪೋಲೀಸ್

ವಿರುದ್ಧ

**ಆರೋಪಿತರು** : 1. ಬಸವರಾಜಪ್ಪ ಬಿನ್ ಮಲ್ಲಪ್ಪ,
ಸುಮಾರು 32 ವರ್ಷ.

2. ನಟರಾಜ ಬಿನ್ ಬಸವರಾಜಪ್ಪ,
ಸುಮಾರು 60 ವರ್ಷ.

ಇಬ್ಬರ ವಾಸಃ ಮಾಳೇನಹಳ್ಳಿ,
ತರೀಕೆರೆ ತಾಲ್ಲೂಕು.

3. ಎಸ್.ಬಿ.ವೇದಮೂರ್ತಿ (ಮೃತಪಟ್ಟಿರುತ್ತಾರೆ)
ಸುಮಾರು 50 ವರ್ಷ,
ವಾಸಃ ಶ್ಯಾನುಭೋಗನಹಳ್ಳಿ,
ತರೀಕೆರೆ ತಾಲ್ಲೂಕು.

----

## ದೋಷಾರೋಪಣೆ

ಶ್ರೀಮತಿ **ರೂಪ.ಎಂ.ಡಿ** ಬಿ.ಎ**(ಎಲ್),** ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ, ತರೀಕೆರೆ ಆದ ನಾನು ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೇಂದರೆ:-

**ದಿನಾಂಕ** 28.12.2012 **ರಂದು ಆರೋಪಿತರಾದ ನೀವುಗಳು ಮೃತ** 3 **ನೇ ಆರೋಪಿಯೊಂದಿಗೆ ಸೇರಿಕೊಂಡು ದಿವಂಗತ ಕಾಳಮ್ಮನವರ ಹೆಸರಿನಲ್ಲಿರುವ ಶ್ರೀರಾಂಪುರ ಗ್ರಾಮದ ಹಳೆ ಸ.ನಂ.**111/01, **ಹೊಸ ಸ.ನಂ.**32/01 **ರಲ್ಲಿ** 3 **ಎಕರೆ** 01 **ಗುಂಟೆ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಒಳಸಂಚನ್ನು ರೂಪಿಸಿದ್ದು,** ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 109 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮ್ಾಡಿರುವಿರಿ.

ಎರಡನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಕಾಳಮ್ಮ ಮೃತವಾಗಿದ್ದರೂ ಸಹ ಯಾರೋ ನಕಲಿ ಕಾಳಮ್ಮನನ್ನು ಸ್ಪಷ್ಟನೇ ಮಾಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 114 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಯಾರೋ ನಕಲಿ ಕಾಳಮ್ಮನನ್ನು ಸ್ಪಷ್ಟನೇ ಮಾಡಿ ಕರೆದುಕೊಂಡು ಬಂದು ಪತ್ರ ಪರಹಗಾರರಾದ ಚಾಸಾ6 ರವರಿಗೆ ಸದರಿ ಜಮೀನಿನ ಮೂಲ ಖಾತೆದಾರರು ಇವರೇ ಎಂದು ನಕಲಿ ಕಾಳಮ್ಮನನ್ನು ತೋರಿಸಿ ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಮಾಹಿತಿಯನ್ನು ನೀಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 177 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಪತ್ರ ಪರಹಗಾರರಾದ ಚಾಸಾ6 ರವರಿಗೆ ಸದರಿ ಜಮೀನಿನ ಮೂಲ ಖಾತೆದಾರರು ಇವರೇ ಎಂದು ನಕಲಿ ಕಾಳಮ್ಮನನ್ನು ತೋರಿಸಿ ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಹೇಳಿಕೆಯನ್ನು ನೀಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ನೈಜ ಕಾಳಮ್ಮ ಇಲ್ಲದಿದ್ದರೂ ಸಹ

ಯಾರೋ ನಕಲಿ ಕಾಳಮ್ಮನನ್ನು ಸ್ಪಷ್ಟನೇ ಮಾಡಿ ಮೂಲ ಕಾಳಮ್ಮ ಇವರೇ ಎಂದು ನಕಲಿ ಕಾಳಮ್ಮನನ್ನು ಸೃಷ್ಟಿ ಮಾಡಿ ನಟಿಸಿ ವಂಚಿಸಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 419 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮ್ಹಾಡಿರುವಿರಿ.

ಆರನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಕಾಳಮ್ಮನು 1,52,000/- ರೂಗಳಿಗೆ ಜಮೀನನ್ನು ಕ್ರಯಕ್ಕೆ ಕೊಟ್ಟಂತೆ ಶುದ್ಧ ಕ್ರಯಪತ್ರವನ್ನು ತಯಾರಿಸಿಕೊಂಡು ತರೀಕೆರೆ ಉಪ ನೋಂದಾಣಾಧಿಕಾರಿಯವರ ಮುಂದೆ ಹಾಜರಾಗಿ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಣಿ ಮಾಡಿ ವಂಚಿಸಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮ್ಹಾಡಿರುವಿರಿ.

ಏಳನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಂಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 423 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮ್ಹಾಡಿರುವಿರಿ.

ಎಂಟನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಜಮೀನನ್ನು ಕ್ರಯಕ್ಕೆ ಕೊಟ್ಟಂತೆ ಶುದ್ಧ ಕ್ರಯಪತ್ರವನ್ನು ತಯಾರಿಸಿಕೊಂಡು ತರೀಕೆರೆ ಉಪ ನೋಂದಾಣಾಧಿಕಾರಿಯವರ ಮುಂದೆ ಹಾಜರಾಗಿ 1 ನೇ ಆರೋಪಿಯ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಣಿ ಮಾಡಿ ವಂಚಿಸಿ

ಕೇಡು ಮಾಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 426 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಒಂಭತ್ತನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ತರೀಕೆರೆ ಉಪ ನೋಂದಾಣಾಧಿಕಾರಿಯವರಿಗೆ ಸುಳ್ಳು ಸ್ವಷ್ಟನೆ ನೀಡಿ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಂಡಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 465 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಹತ್ತನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಕಾಳಮ್ಮನು 1,52,000/- ರೂಗಳಿಗೆ ಜಮೀನನ್ನು ಕ್ರಯಕ್ಕೆ ಕೊಟ್ಟಂತೆ ಶುದ್ಧ ಕ್ರಯಪತ್ರವನ್ನು ತಯಾರಿಸಿಕೊಂಡು ತರೀಕೆರೆ ಉಪ ನೋಂದಾಣಾಧಿಕಾರಿಯವರಿಗೆ ಸುಳ್ಳು ಸ್ವಷ್ಟನೆ ನೀಡಿ ಅವರ ಮುಂದೆ ಹಾಜರಾಗಿ 1 ನೇ ಆರೋಪಿಯಾದ ನಿಮ್ಮ ಹೆಸರಿಗೆ ಶುದ್ಧಕ್ರಯಪತ್ರವನ್ನು ನೋಂದಣಿ ಮಾಡಿ ವಂಚಿಸಿದ್ದು ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 468 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಹನೊಂದನೇಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಸದರಿ ಜಮೀನಿನ ಶುದ್ಧ ಕ್ರಯಪತ್ರ ಮಾಡಿಕೊಡುತ್ತಿರುವವರು ನಿಜ ಕಾಳಮ್ಮನಲ್ಲವೆಂದು ತಿಳಿದೂ ಹಾಗೂ ತಮಗೆ ಪರಿಚಯವಿಲ್ಲದೆ ಇದ್ದರೂ ಸಹ 2 ನೇ ಆರೋಪಿಯಾದ ನೀವು ಹಾಗೂ ಮೃತ 3 ನೇ ಆರೋಪಿತನೊಂದಿಗೆ ಸುಳ್ಳು ಸ್ವಷ್ಟನೆಯ ದಸ್ತಾವೇಜನ್ನು ನೈಜವಾದುದೆಂದು ಉಪ

**ನೋಂದಣಾಧಿಕಾರಿಯವರ ಮುಂದೆ ಬಳಸಿದ್ದು,** ಆದ್ದರಿಂದ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 471 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**ಕೊನೆಯದಾಗಿ ಮೇಲ್ಕಂಡ ಸ್ಥಳ, ದಿನಾಂಕ ಮತ್ತು ವಿಚಾರವಾಗಿ ಆರೋಪಿತರಾದ ನೀವುಗಳು ಮುಂದುವರೆದು ಮೃತ** 3 **ನೇ ಆರೋಪಿಯೊಂದಿಗೆ ಸೇರಿಕೊಂಡು, ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಸದರಿ ಜಮೀನಿನ ಶುದ್ಧ ಕ್ರಯಪತ್ರ ಮಾಡಿಕೊಡುತ್ತಿರುವವರು ನಿಜ ಕಾಳಮ್ಮನಲ್ಲವೆಂದು ತಿಳಿದೂ ಹಾಗೂ ತಮಗೆ ಪರಿಚಯವಿಲ್ಲದೆ ಇದ್ದರೂ ಸಹ** 2 **ನೇ ಆರೋಪಿಯಾದ ನೀವು ಹಾಗೂ ಮೃತ** 3 **ನೇ ಆರೋಪಿತನೊಂದಿಗೆ ಸುಳ್ಳು ಸ್ಪಷ್ಟನೆಯ ದಸ್ತಾವೇಜನ್ನು ನೈಜವಾದುದೆಂದು ಬಳಸಿ ಉಪ ನೋಂದಣಾಧಿಕಾರಿಯವರ ಮುಂದೆ ನೋಂದಾಯಿತ ಮೂಲ ಶುದ್ಧ ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದು,** ಆದ್ದರಿಂದ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 474 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 13ನೇ **ಜನವರಿ** ಮಾಹೆ 2022

**ಸಹಿ/-**
**(ರೂಪ.ಎಂ.ಡಿ)**
ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,
ತರೀಕೆರೆ.